ವಿಷಯ :–ರಾಜಾಜಿನಗರದಲ್ಲಿ ಸಾರ್ವತ್ರಿಕ ಆಸ್ಪತ್ರೆಯನ್ನು ನಿರ್ಮಿಸುವುದು.

ಪ್ರ. 172 (56) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ರಾಜಾಜಿನಗರದ ಕ್ಷೇತ್ರದ ಸಾರ್ವಜನಿಕರು ಏರಿಯಾದಲ್ಲಿ ಸಾರ್ವಜನಿಕ ಆಸ್ಪತ್ರೆಯನ್ನು ಕಟ್ಟಲು ಸಂಬಂಧಪಟ್ಟ ಅಧಿಕಾರಿಗಳನ್ನು ಒತ್ತಾಯಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ ;

ಆ. ಮಾನ್ಯ ಸಚಿವರು ವಿಧಾನಸಭಾ ಸದಸ್ಯರೊಂದಿಗೆ ಆಸ್ಪತ್ರೆ ಕಟ್ಟಲು ಸ್ಥಳ ಪರಿಶೀಲನೆ ಮಾಡಿದ್ದಾರೆಯೇ ;

ಇ. ಹಾಗೂ ಸಾರ್ವಜನಿಕ ಆಸ್ಪತ್ರೆಯನ್ನು ಕಟ್ಟಲು ಸ್ಥಳವನ್ನು ನಿರ್ದಿಷ್ಟಪಡಿಸುವ ಸಲುವಾಗಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳು ಮತ್ತು ಇತರೇ ಕೆಲಸಗಳನ್ನು ಆ ಸ್ಥಳದಲ್ಲಿ ತೆಗೆದುಕೊಂಡಿರುವ ಬಗ್ಗೆ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು) :—

ಅ. ಬಂದಿದೆ.

ಆ. ಸಚಿವರು ಸ್ಥಳ ಪರಿಶೀಲನೆ ಮಾಡಿದ್ದಾರೆ.

ಇ. ಪರಿಶೀಲನೆಯಲ್ಲಿದೆ.

ಶ್ರೀ ಎಂ.ಎಸ್. ಕೃಷ್ಣನ್.—ನನ್ನ ಎರಡನೆ ಪ್ರಶ್ನೆಯಲ್ಲಿ ಆಸ್ಪತ್ರೆ ಕಟ್ಟಲು ಸ್ಥಳ ಪರಿಶೀಲನೆ ಮಾಡಿದ್ದಾರೆಯೇ ಎಂಬುದಕ್ಕೆ ಉತ್ತರವಾಗಿ ಸಚಿವರು ಸ್ಥಳ ಪರಿಶೀಲನೆ ಮಾಡಿದ್ದಾರೆ. ಎಂದು ಉತ್ತರ ಕೊಟ್ಟಿದ್ದಾರೆ. ಆದರೆ ಮೂರನೆ ಪ್ರಶ್ನೆಗೆ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಈ ಬಗ್ಗೆ ಏನಾದರೂ ಪ್ಲಾನ್ ಮತ್ತು ಎಸ್ಟಿಮೇಟ್ ಮಾಡಿಸಿದ್ದೀರಾ, ಯಾವಾಗ ಅಪ್ರೂವಲ್ ಕೊಡುತ್ತೀರಿ, ಈ ಬಗ್ಗೆ ವಿವರ ಹೇಳುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.—ರಾಜಾಜಿನಗರ ಕ್ಷೇತ್ರ ಸಾಮಾನ್ಯವಾಗಿ ಕಾರ್ಮಿಕರಿರುವ ಪ್ರದೇಶವಾಗಿರುವುದರಿಂದ ಅಲ್ಲಿ ಇ.ಎಸ್.ಐ. ಆಸ್ಪತ್ರೆ ಇದೆ. ಅದಕ್ಕೆ ಸಮೀಪವಾಗಿ ಮಲ್ಲೇಶ್ವರದಲ್ಲಿ ಕೆ.ಸಿ. ಜನರಲ್ ಹಾಸ್ಪಿಟಲ್ ಇದೆ. ಅಲ್ಲಿರುವ ನಾಗರೀಕರಿಗೆ ಸಧ್ಯಕ್ಕೆ ಎರಡು ಆಸ್ಪತ್ರೆಗಳಿರುವುದರಿಂದ ಮಹಾನಗರ ಯೋಜನೆಯಲ್ಲಿ ಹೊಸ ಆಸ್ಪತ್ರೆ ಕಟ್ಟಡ ಕಟ್ಟುವ ಕಾರ್ಯಕ್ರಮ ಸದ್ಯಕ್ಕಿಲ್ಲ. ಆದರೆ ಅಲ್ಲಿ ಆಸ್ಪತ್ರೆ ಆಗಬೇಕು ಎಂಬುದು ಸಾರ್ವಜನಿಕರ ಅಭಿಪ್ರಾಯವಾಗಿದೆ. ಆಕಾರಣದಿಂದಲೇ ಪರಿಶೀಲನೆ ಮಾಡಲಾಗುತ್ತಿದೆ. ಎಂದು ಹೇಳಿದ್ದೇವೆ.

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಮಂತ್ರಿಗಳು ರಾಜಾಜಿನಗರದಲ್ಲಿ ಕಾರ್ಮಿಕರು ಹೆಚ್ಚಾಗಿದ್ದಾರೆ ಎಂದು ಹೇಳಿದರು. ಆದರೆ ಮಾನ್ಯ ಮಂತ್ರಿಗಳು ಹೇಳುವ ರೀತಿಯಲ್ಲಿ ಕಾರ್ಮಿಕರ ಪರ್ಸೆಂಟೇಜ್ ಇಲ್ಲ. ಇ.ಎಸ್.ಐ. ಆಸ್ಪತ್ರೆಯಲ್ಲಿ ಕಾರ್ಮಿಕರು ಮಾತ್ರ ಹೋಗಲು ಅವಕಾಶವಿದೆಯೇ ಹೊರತು ಬೇರೆಯವರಿಗೆ ಅಲ್ಲಿ ಅವಕಾಶವಿಲ್ಲ. ಅದು ಬಿಟ್ಟರೆ ಕೆ.ಸಿ. ಜನರಲ್ ಆಸ್ಪತ್ರೆಗೆ ಹೋಗಬೇಕಾದರೆ ಮಲ್ಲೇಶ್ವರಕ್ಕೆ ಹೋಗಬೇಕು. ಅದು ಬಹಳ ದೂರವಾಗುತ್ತದೆ. ರಾಜಾಜಿನಗರ ಪ್ರದೇಶ ಬೃಹದಾಕಾರವಾಗಿ ಬೆಳೆಯುತ್ತಿರುವುದರಿಂದ ಆಸ್ಪತ್ರೆ ನಿರ್ಮಾಣದ ಬಗ್ಗೆ ಗಮನ ಹರಿಸುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.—ಸಧ್ಯಕ್ಕೆ ಮಹಾನಗರ ಯೋಜನೆಯಲ್ಲಿ ಆ ವಿಷಯ ಇಲ್ಲ ಆಲ್ಲಿನ ಸಾರ್ವಜನಿಕರ ಒತ್ತಾಯವನ್ನು ಅರಿತು ಮುಂದಿನ ಮಹಾನಗರ ಸಭೆ ಆ ಕಡೆ ಯೋಚನೆ ಮಾಡಿದರೆ ಕೆಲಸ ತೆಗೆದುಕೊಳ್ಳಬಹುದು.

ವಿಷಯ :– ಶಿರಾತಾಲ್ಲೂಕಿನಲ್ಲಿ ಸಹಕಾರಿ ಸಾಲದ ಮರುಪಾವತಿಗೆ ನಿಗದಿಗೊಳಿಸಿ ಕಾಲಾವಧಿಯನ್ನು ವಿಸ್ತರಿಸುವುದು.

ಪ್ರ. 173(104) ಶ್ರೀ ಪಿ. ಮೂಡ್ಲೆಗೌಡ (ಶಿರಾ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ಶಿರಾ ತಾಲ್ಲೂಕಿನಲ್ಲಿ 30–6–83 ವರೆಗಿನ ಸಹಕಾರಿ ಸಾಲದ ವಸೂಲಾತಿ ಎಷ್ಟು ;

ಆ. ಇದರಿಂದ ರೈತರಿಗೆ ರಿಯಾಯಿತಿ ಆದ ಬಡ್ಡಿಯ ಮೊತ್ತವೆಷ್ಟು ;

ಇ. ಪಾಲಿ ಕಟ್ಟದೆ ಉಳಿದಿರುವ ರೈತರೆಷ್ಟು ಕಡು ಬಡವರಾಗಿದ್ದು ಸಾಲ ತೀರಿಸಲು ಅಶಕ್ತರಾದ ಪ್ರಯುಕ್ತ ಈ ರಿಯಾಯಿತಿಯನ್ನು ಮುಂದಿನ ಸುಗ್ಗಿಯವರೆಗೆ ಮುಂದುವರಿಸುವ ಬಗ್ಗೆ ಸರ್ಕಾರದ ನಿಲುವೇನು ?

ಆರ್.ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು) :—